

## ಕಳೆದ ಸಂಚಿಕೆಯಲ್ಲಿ

ಮತ್ತೆ ಮನೆ ಬದಲಾಯಿಸುವ ಪ್ರಮೇಯ ಬಂತು. ಇಲ್ಲೂ ನೆರೆಮನೆಯವರ ವ್ಯಂಗ್ಯ–ಕುಹಕದ ಮಾತಿಗೆ ಒಳಗಾಗಬೇಕಾಯಿತು ರಿತಿಕ್–ಸುಗಂಧಾ. ಒಮ್ಮೆ ಚಾಟ್ ತಿನ್ನೋದಕ್ಕೆ ಸಿಟಿ ಸರ್ವೀಸ್ ಸೆಂಟರ್‌ಗೆ ಹೋಗುತ್ತಾರೆ. ಅಲ್ಲಿ ರಿತಿಕ್ ಸಹೋದ್ಯೋಗಿ ಶರ್ಮಾ ತನ್ನ ಕುಟುಂಬದವರ ಜೊತೆಗೆ ಬಂದಿರುತ್ತಾರೆ. ಅವರೂ ರಿತಿಕ್‌ನನ್ನು ಉದ್ದೇಶಿಸಿ, 'ಅತ್ತಿಗೆ ಕರೆದುಕೊಂಡು ಬಂದಿದ್ಯಾ' ಎಂದು ಪ್ರಶ್ನಿಸುತ್ತಾರೆ. ಆಗ ರಿತಿಕ್, ಸುಗಂಧಾ ತನ್ನ ಹೆಂಡತಿ ಅಲ್ಲ ಎಂಬುದನ್ನು ಹೇಳುವುದೇ ಇಲ್ಲ. ಅಲ್ಲಿ ಶರ್ಮಾ ಮಗುವನ್ನು ನೋಡಿದ ಮೇಲೆ ರಿತಿಕ್‌ಗೆ ತನಗೂ ಮಗು ಬೇಕು ಎನಿಸಿದೆ. ಸುಗಂಧಾಳನ್ನು ಕೇಳಿದಾಗ, ತಾನು ಸಹ ಮಗು ಹೆರುವ ಆಸಕ್ತಿ ಹೊಂದಿರುವುದಾಗಿ ತಿಳಿಸುತ್ತಾಳೆ. ಈ ಸಂದರ್ಭದಲ್ಲಿ ಸುಗಂಧಾ ಅವರ ಪ್ರಾಧ್ಯಾಪಕಿ ಲತಾ ಪಾಂಡೆಯವರ 'ಇಂಥದ್ದೇ' ಸಂಬಂಧದ ಬಗ್ಗೆ ನೆನಪಾಗುತ್ತದೆ. ಕೊನೆಗೆ ಲತಾ ಪಾಂಡೆ ಖಿನ್ನತೆಗೆ ಒಳಗಾಗುತ್ತಾರೆ. ಸಹ ಸಂಬಂಧದ ಬಗ್ಗೆ, ಆನರ್ ಕಿಲಿಂಗ್ ಬಗ್ಗೆ ಮಾತುಕತೆ ನಡೆಯುತ್ತದೆ. ಈ ಮಧ್ಯೆ ಮನೆಯ ಮಾಲೀಕ ಬಂದು, 'ಸಂಬಂಧವನ್ನು ಅಕ್ರಮವಾಗಿ ನಡೆಸುವುದು ತಪ್ಪಲ್ಲ. ಆದರೆ ಸಮಾಜದ ಕಣ್ಣಿಗೆ ಬೀಳಬಾರದು' ಎಂದು ಹೇಳಿದ ಕಿವಿಮಾತು ರಿತಿಕ್ ಅನ್ನು ಕೆರಳಿಸುತ್ತದೆ. ಕೊನೆಗೆ, 'ನೀವಿಬ್ಬರೂ ಮದುವೆಯಾಗಿ' ಎಂದು ಹೇಳಿಹೋದ.

'ನೀನು ಎಂದಾದರು ಬಿ.ಎಫ್. ನೋಡಿದ್ದೀಯ?' ಅದೊಂದು ದಿನ ಅಕಸ್ಮಾತ್ ಕೀರ್ತಿ ಕೇಳಿದ್ದಳು.

'ಬಿ.ಎಫ್.?' ನನಗೆ ಅರ್ಥವಾಗಿರಲಿಲ್ಲ.

'ಅಂದರೆ ಬ್ಲೂ ಫಿಲ್ಮ್', ಕೀರ್ತಿ ಪಿಸುಗುಟ್ಟಿದ್ದಳು.

'ಹೂಂ, ರಿತಿಕ್‌ನೊಂದಿಗೆ ಒಂದೆರಡು ಬಾರಿ ನೋಡಿದ್ದೇನೆ', ನಾನು ಸಂಕೋಚದಿಂದ ಹೇಳಿದ್ದೆ. ಆಗ ಅಲ್ಲಿ ಕೀರ್ತಿ ಮತ್ತು ನಾನು ಮಾತ್ರ ಇದ್ದೆವು.

'ನನ್ನವರಿಗೆ ಈ ಬಗ್ಗೆ ತುಂಬಾ ಆಸಕ್ತಿಯಿದೆ. ನಿನಗೆ ಸಿ.ಡಿ. ಬೇಕಿದ್ದರೆ, ಹೇಳು. ಇವರ ಬಳಿ ಸಾಕಷ್ಟು ಇವೆ' ಎಂದಿದ್ದಳು ಕೀರ್ತಿ.

'ಇಲ್ಲ! ಪ್ರಾರಂಭದಲ್ಲಿ ನೋಡಿದ್ದೇವೆ, ಈಗ ನೋಡಲ್ಲ', ನಾನು ಕೂಡಲೇ ಉತ್ತರಿಸಿದ್ದೆ. ನಾನು ಅವಳಿಂದ ಇಂಥದ್ದನ್ನೆಲ್ಲಾ ತೆಗೆದುಕೊಳ್ಳುತ್ತಿರಲಿಲ್ಲ.

'ನೋಡಮ್ಮ, ಇದರಲ್ಲೇನು ನಾಚಿಕೆ? ನಾವೆಲ್ಲರು ವಯಸ್ಕರು, ನಾವು ನೋಡಬಹುದು' ಕೀರ್ತಿ ತರ್ಕಿಸಿದ್ದಳು.

'ಹೂಂ, ಆದ್ರೆ ನಾನು ತಗೊಂಡು ಹೋದ್ರೆ ರಿತಿಕ್‌ಗೆ ವಿಚಿತ್ರವೆಂದು ಅನ್ನಿಸಬಹುದು, ಬೇಕಾದರೆ ಅವನೇ ತರ್ತಾನೆ'. ನಾನು ನನ್ನ ನಿಲುವನ್ನು ಸ್ಪಷ್ಟಪಡಿಸಿದ್ದೆ. ಆದರೆ ರಿತಿಕ್ ಅಂಥ ಫಿಲ್ಮ್‌ಗಳನ್ನು ತರಲೆಂದು ನಾನು ಬಯಸುತ್ತಿರಲಿಲ್ಲ. ಆ ಕಸುಬುದಾರರ ಚೇಷ್ಟೆಗಳನ್ನು ನೋಡಿನೋಡಿ ರಿತಿಕ್‌ಗೆ, ನಾನು ಆ ಫಿಲ್ಮ್‌ಗಳ ನಾಯಕಿಯರಂತೆ ವರ್ತಿಸಬೇಕೆಂದು ಅನ್ನಿಸುತ್ತದೆ, ಆದರೆ ಅದು ಈಗ ಸಾಧ್ಯವಿಲ್ಲ.

'ತಿನ್ನುವ ಕಾಂಟ್ರಸೆಪ್ಟಿವ್ ಮಾತ್ರೆಗಳನ್ನು ಕಡಿಮೆ ಉಪಯೋಗಿಸಬೇಕು, ಇದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತೆ ಅಂತ ಹೇಳ್ತಾರೆ', ಕೀರ್ತಿ ನನಗೆ ತನ್ನ ಅಭಿಪ್ರಾಯವನ್ನು ಹೇಳಿದ್ದಳು.

'ಆದ್ರೆ ಇದರಲ್ಲಿ ಕಡಿಮೆ ಪ್ರಮಾಣದ ಅಪಾಯವಿರುತ್ತದೆ' ಎಂದಿದ್ದೆ.

'ಹೂಂ, ಇದರಿಂದ ಹಾರ್ಮೋನ್‌ಗಳಲ್ಲಿ ವ್ಯತ್ಯಾಸವುಂಟಾಗಬಹುದು'

'ಆರ್ ಯೂ ಶೂರ್?' ನಾನು ಗಾಬರಿಯಿಂದ ಕೇಳಿದ್ದೆ.

'ನೋ, ಐ ಯಾಮ್ ನಾಟ್ ಶೂರ್. ಬಟ್ ಪಿಲ್ಸ್ ತಯಾರಕರೇ, ದೀರ್ಘ ಕಾಲಕ್ಕೆ ಬೇರೆ ವಿಧಾನಗಳನ್ನು ಅನುಸರಿಸಬೇಕೆಂದು ಹೇಳ್ತಾರೆ', ಎಂದಳು ಕೀರ್ತಿ.

'ಬೇರೆ ವಿಧಾನಗಳು?'

'ಹೌದು, ನಾನು ಮಕ್ಕಳಾದ ನಂತರ ಆಪರೇಶನ್ ಮಾಡಿಸಿಕೊಂಡೆ. ನೀನು... ನೀನು ಡಾಕ್ಟರರ ಸಲಹೆ ಪಡಿ' ಎಂದಳು ಕೀರ್ತಿ.

'ಯೋಚ್ನೆ ಮಾಡ್ತೀನಿ'

'ನನ್ನ ಜೊತೆಗೆ ಬರಬಹುದು' ಎಂದಳು ಕೀರ್ತಿ.

ಕೀರ್ತಿಯೊಂದಿಗಿನ ಈ ಮಾತುಕತೆ ನನ್ನ ಅವಚೇತನ (ಸಬ್‌ಕಾನ್ಸಿಯಸ್) ಮನಸ್ಸಿನಲ್ಲಿ ಎಷ್ಟು ಪ್ರಭಾವ ಬೀರಿತೆಂದರೆ, ನಾನು ಕಾಂಟ್ರಸೆಪ್ಟಿವ್ ಪಿಲ್ಸ್‌ಗಳನ್ನು ತಿನ್ನುವುದನ್ನೇ ನಿಲ್ಲಿಸಿದೆ. ಆದರೆ ಹಾಕಿಕೊಳ್ಳುವ ಪಿಲ್ಸ್ ಬಗ್ಗೆ ನನಗೆ ಸಂಪೂರ್ಣ ವಿಶ್ವಾಸವಿರಲಿಲ್ಲ. ಹೀಗಾಗಿ ನಾನು ಖಿನ್ನತೆಗೊಳಗಾದೆ. ಇದನ್ನು ರಿತಿಕ್ ಗಮನಿಸಿದ.

'ಆರೋಗ್ಯ ಸರಿಯಿದೆ ತಾನೇ?' ಅದೊಂದು ದಿನ ರಿತಿಕ್ ಕೇಳಿದ.

'ಹೂಂ, ಸರಿಯಿದೆ'

'ನೀನು ಈಚೆಗೆ ಸೆಕ್ಸ್ ಆದ ಮೇಲೆ ಒಂದು ಥರಾ ಇರ್ತಿರೋದನ್ನು ನೋಡ್ತಿದ್ದೇನೆ. ನನ್ನಲ್ಲಿ ಏನಾದ್ರು ಕೊರತೆ ಬಂತೆ?'

'ಅಂಥದ್ದೇನಿಲ್ಲ'

'ಏನೋ ಇದೆ. ಪ್ಲೀಸ್ ಹೇಳು'

ಕಡೆಗೆ ನಾನು ನನ್ನ ಮನಸ್ಸಿನ ಹೊಯ್ದಾಟವನ್ನು ರಿತಿಕ್‌ಗೆ ಹೇಳಿದೆ.

'ಸರಿ, ನಾಳೆ ನಾನು ಡಾಕ್ಟರನ್ನು ಕೇಳ್ತೀನಿ' ರಿತಿಕ್ ನನಗೆ ಭರವಸೆ ಕೊಟ್ಟ. ನಾನು ನಿಶ್ಚಿಂತಳಾದೆ. ಇಂಥ ವಿಷಯಗಳ ಬಗ್ಗೆ ಚರ್ಚಿಸುವುದು ಪುರುಷರಿಗೆ ಸುಲಭವಾಗುತ್ತದೆ. ಮಹಿಳೆಯರಿಗೂ ಸುಲಭವಾಗಬಹುದೇನೋ, ಆದರೆ ನಾನು ಅಂಥ ಮಹಿಳೆಯಾಗಿರಲಿಲ್ಲ. ನಾನೆಂದೂ ನನ್ನ ಮನೆಯಲ್ಲಿ ಅತ್ತಿಗೆಮೈದುನನ ಕಥೆಯನ್ನು ಕೇಳಿರಲಿಲ್ಲ. ಮಹಿಳೆಪುರುಷನ ದೈಹಿಕ ಸಂಬಂಧಗಳನ್ನು ಅರಿತ ನಂತರ, ಅಮ್ಮನ ಬಳಿಗೆ ಬರುತ್ತಿದ್ದ ಸೇಲಟ್ ಅಂಕಲ್‌ರೊಂದಿಗೆ ಅಮ್ಮನ ಸಂಬಂಧ ಯಾವ ರೀತಿಯದಾಗಿತ್ತು ಎಂಬುದು ಅರ್ಥವಾಗಿತ್ತು. ಅಮ್ಮ ಸಹ ಒಬ್ಬ ಹೆಣ್ಣಾಗಿದ್ದಳು. ಅವಳಿಗೂ ತನ್ನದೇ ಆದ ಕೆಲವು ದೈಹಿಕ ಅವಶ್ಯಕತೆಗಳಿರಬೇಕು. ಆದರೆ ನನ್ನ ಮತ್ತು ಅಮ್ಮನ ನಡುವೆ, ಅವರು ನನಗೆ ತಮ್ಮ ದೈಹಿಕ ಸಂಬಂಧಗಳ ಬಗ್ಗೆ ಚರ್ಚಿಸುವಷ್ಟು ಬಿಚ್ಚು ಮನಸ್ಸಿರಲಿಲ್ಲ. ತಾಯಿ ಮಗಳ ನಡುವೆ, ಸಂಬಂಧವಷ್ಟೇ ಇತ್ತು. ನಮ್ಮ ನಡುವೆ ಸಂಕೋಚದ ಪರದೆಯೊಂದು ಸದಾ ಇರುತ್ತಿತ್ತು.

'ನೀನು ಕಾಪರ್‌ಟೀ ಹಾಕಿಸಿಕೋ' ಮೂರು ದಿನಗಳ ನಂತರ ರಿತಿಕ್ ಹಾಸಿಗೆಗೆ ಬರುತ್ತಲೇ ಹೇಳಿದ.

'ವ್ಹಾಟ್?' ನನಗೆ ಆಶ್ಚರ್ಯವಾಯಿತು. ನನ್ನ ಕಿವಿಗಳನ್ನು ನಂಬದಾದೆ.

'ಇದೇನು ಹೇಳ್ತಿದ್ದೀಯ?'

'ತಿನ್ನುವ ಗರ್ಭ ನಿರೋಧಕ ಮಾತ್ರೆಗಳಿಂದ ನಿನ್ನ ಆರೋಗ್ಯಕ್ಕೆ ಹಾನಿಯಾಗುವ ಭಯವಿದೆ ಎಂದು ನೀನು ಹೇಳಿದ್ದೆ. ಅದಕ್ಕೇ ನಾನು ನಿನ್ನೆ ಡಾಕ್ಟರನ್ನು ಈ ಬಗ್ಗೆ ಕೇಳಿದ್ದೆ, ನಿನ್ನೆ ಹೇಳುವುದನ್ನು ಮರೆತೆ. ನೀನು ಕಾಪರ್‌ಟೀ ಹಾಕಿಸಿಕೊಳ್ಳುವಂತೆ ವೈದ್ಯರು ಸಲಹೆ ಕೊಟ್ಟಿದ್ದಾರೆ' ಎಂದ ರಿತಿಕ್.

'ಆದ್ರೆ ಅದು ಮ್ಯಾರೀಡ್ ವುಮೆನ್‌ಗೆ...' ಎಂದು ಮಾತನ್ನು ನಿಲ್ಲಿಸಿದ್ದೆ. ಉಪಚಾರ ರೋಗಕ್ಕೆ, ಪರಿಸ್ಥಿತಿಗಳಿಗಲ್ಲ.

'ನೀನು ಸಹ ಅದೇ ಲೈಫ್ ಲೀಡ್ ಮಾಡ್ತಿದ್ದೀಯ', ರಿತಿಕ್ ಹೇಳಿಯೇ ಬಿಟ್ಟ. ವಿಷಯ ನಿಜವಾಗಿತ್ತು. ಒಬ್ಬ ವಿವಾಹಿತ ಹೆಣ್ಣಿನ ದೇಹಕ್ಕೆ ಸಿಗುವ ಎಲ್ಲವನ್ನು ನನ್ನ ದೇಹ ಪಡೆಯುತ್ತಿತ್ತು. ಆದರೆ ನಾನು ವಿವಾಹಿತೆಯಾಗಿರಲಿಲ್ಲ; ನಾನು 'ಲಿವ್ ಇನ್ ರಿಲೇಶನ್' ಅಡಿಯಲ್ಲಿ ರಿತಿಕ್‌ನೊಂದಿಗಿರುತ್ತಿದ್ದೆ. ಮಹಾನಗರಗಳ ಮಹಿಳೆಯರು 'ಲಿವ್ ಇನ್ ರಿಲೇಶನ್'ನಲ್ಲಿ ತಮ್ಮ ದೇಹವನ್ನು ಗರ್ಭಧಾರಣೆಯಿಂದ ಹೇಗೆ ಮುಕ್ತಗೊಳಿಸಿಕೊಳ್ಳುತ್ತಾರೆ ಎಂಬುದು ನನಗೆ ತಿಳಿದಿರಲಿಲ್ಲ. ನಾನು ಅವರಂತೆ ಬದುಕಲು ಬಯಸುತ್ತಿದ್ದೆ, ಬದುಕುತ್ತಲೂ ಇದ್ದೆ. ಆದರೆ ನನ್ನ ಕಸಬಾ ರೀತಿಯಂತೆ ಬದುಕುತ್ತಿದ್ದೆ; ಇಲ್ಲಿ ಸಂಕೋಚ, ವಿಘ್ನ, ಬಂಧನ ಹೆಚ್ಚಿತ್ತು, ಸ್ವಾತಂತ್ರ್ಯ ಕಡಿಮೆಯಿತ್ತು. ನನಗೆ ಸ್ವಾತಂತ್ರ್ಯದ ಭ್ರಮೆ ಇರಲಿಲ್ಲ ತಾನೇ? ನಾನು ಹೆದರಿದೆ.

'ಆದರೆ ಇದು ಉಚಿತವೇ? ಬೇರೆ ಉಪಾಯವಿಲ್ಲವೇ?' ನಾನು ರಿತಿಕ್ ವೈದ್ಯನೆಂಬಂತೆ ಕೇಳಿದೆ.

'ನಾನು ವೈದ್ಯರನ್ನು ಕೇಳಿದ್ದೆ, ಅವರು ಇದೇ ಸರಿ, ನಿಮಗೆ ಬೇಕೆನಿಸಿದಾಗ ಅದನ್ನು ಹೊರಗೆ ತೆಗೆಸಿ ತಾಯಿಯಾಗಬಹುದು ಎಂದು ಹೇಳಿದರು' ಎಂದ ರಿತಿಕ್.

'ಅದು ಸರಿ, ಆದ್ರೆ ನಾನು ಕಾಪರ್‌ಟೀ ಹಾಕಿಸಿಕೊಳ್ಳಲು ಹೇಗೆ ಹೋಗಲಿ? ಅಲ್ಲಿ, ನೀವು ವಿವಾಹಿತರೋ, ಅವಿವಾಹಿತರೋ ಎಂದು ಕೇಳ್ತಾರೆ, ಆಗ...?' ನಾನು ನನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದೆ.

(ಸಶೇಷ)